ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. —ಎಲ್ಲಿ ನೀರು ಸಿಕ್ಕುತ್ತದೆಯೋ ಅಲ್ಲಿಂದ ತೆಗೆದುಕೊಂಡು ಹೋಗಿ ನೀರನ್ನು ಒದಗಿಸುತ್ತೇವೆ.

Formation of Separate Baindur Taluk

557. Sri A. G. KODGI (Baindur).—

Will the Minister for Revenue be pleased to state.—

(*a*) whether it has come to the notice of the Government that Baindur constituency of South Kanara district is economically, socially and educationally most backward area in the State and that for administrative convenience it is necessary to form a separate taluk;

(*b*) whether there is any demand before the Government for formation of separate Baindur taluk; if so, since when;

(*c*) the estimated recurring and non-recurring expenditure to be incurred for this purpose;

(*d*) whether the Government would take a suitable and early decision to form a separate taluk with a view to develop this backward area?

Sri N. HUTCHAMASTHY GOWDA (Minister for Revenue).—

(*a*) The proposals have been received for formation of separate Baindur Taluk.

(*b*) Yes, since 1966.

(*c*) As per the estimates prepared in 1963, the recurring expenditure is Rs.65,000. and non recurring expenditnre is Rs. 2,00,000.

(*d*) The question of re-organisation of many Taluks in the State is under the consideration of the Government.

ಶ್ರೀ ಎ. ಜಿ. ಕೊಡಗಿ.—ಮೊದಲನೆಯ ಪ್ರಶ್ನೆಗೆ ನೇರವಾಗಿ, ಆದರಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶವೆಂದು, ಆಡಳಿತ ದೃಷ್ಟಿಯಿಂದ ಪ್ರತ್ಯೇಕ ತಾಲ್ಲೂಕನ್ನು ಮಾಡಬೇಕೆಂಬ ನಲಹೆಗಳು ಬಂದಿವೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆಗೆ ಸರಿಯಾದ ಉತ್ತರ ದೊರಕಲಿಲ್ಲ. ಹಿಂದುಳಿದ ಪ್ರದೇಶ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದುಳಿದ ಪ್ರದೇಶವಲ್ಲ ಎಂದು ನೇರವಾಗಿ ಉತ್ತರ ಹೇಳುವುದಕ್ಕೆ ಬದಲಾಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ಹೇಳಿ ಆ ಯೋಚನೆ ಇದೆಯೆಂದು ಹೇಳಿದ್ದೇನೆ ಅಷ್ಟೆ.

ಶ್ರೀ ಎ. ಜಿ. ಕೊಡಗಿ.—ತಾವು ಹಿಂದುಳಿದ ಪ್ರದೇಶವೆಂದು ಒಪ್ಪಿಕೊಂಡಿದ್ದೀರಿ ಎಂದು ನನ್ನ ಭಾವನೆ. ಈಗೆ ಇರುವಾಗ 1966 ರಿಂದ ಇದು ಪರಿಶೀಲನೆಯಲ್ಲಿದೆ, ಪ್ರತ್ಯೇಕ ತಾಲ್ಲೂಕನ್ನು ಮಾಡಬೇಕೆಂದು ಸಲಹೆಗಳು ಬಂದಿವೆ ಎಂದು ಹೇಳಿದ್ದೀರಿ. (ಇ) ಗೆ ಉತ್ತರ ನೋಡಿದರೆ ಕೇವಲ ಆವೃತ್ತ ವೆಚ್ಚ 65000 ರೂಪಾಯಿ ಅನಾವೃತ್ತ ವೆಚ್ಚ 2 ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ಆರ್ಥಿಕ ದೃಷ್ಟಿಯಿಂದ ನೋಡಿದಾಗ ಇದು ನಣ್ಣ ಪೊತ್ತ. ಇದು ಆರ್ಥಿಕವಾಗಿ ಹಿಂದುಳಿದ ಪ್ರದೇಶವಿರುವಾಗ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಂಡು, ಆಡಳಿತದ ಅನುಕೂಲಕ್ಕಾಗಿ ಬೇರೆ ತಾಲ್ಲೂಕನ್ನು ರಚನೆ ಮಾಡಲಿಕ್ಕೆ ಇಚ್ಛೆಪಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು 1966 ರಲ್ಲಿ ಬಂದಂಥ ನಲಹೆ. ಆ ಪ್ರಕಾರವಾಗಿ ಖರ್ಚಾಗುತ್ತಾ ಇದ್ದುದು ಇಷ್ಟು, ಈಗ ಆಲೋಚನೆ ಮಾಡಿದರೆ ಒಂದಕ್ಕೆ ಎರಡರಷ್ಟು ಇನ್ನೂ ಹೆಚ್ಚು ಖರ್ಚಾಗಬಹುದು, ಕೂಡಲೆ ಕಾರ್ಯಗತ ಮಾಡದೆ ಇರುವುದಕ್ಕೆ ಇದು ಒಂದು ಕಾರಣ. ಇನ್ನೊಂದು ಕಾರಣ ಇದರಂತೆ ಅನೇಕ ತಾಲ್ಲೂಕುಗಳನ್ನು ಮತ್ತು ಜಿಲ್ಲೆಗಳನ್ನು ಕೂಡ ಪುನರ್ವಿಂಗಡಣೆ ಮಾಡತಕ್ಕ ಅವಕಾಶ ಇದೆ. ಆಗಿಂದಾಗೆ ಇದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಅದಕ್ಕೋಸ್ಕರ ಒಂದು ಆಯೋಗವನ್ನು ನೇಮಿಸಿ, ಇಡೀ ರಾಜ್ಯದ ಜಿಲ್ಲೆಗಳು ಮತ್ತು ತಾಲ್ಲೂಕುಗಳನ್ನು ಮತ್ತು ಫಿರ್ಕಾಗಳನ್ನು ಎಲ್ಲೆಲ್ಲಿ ಸೇರಿಸಬೇಕು ಎಂದು ಪೂರ್ಣವಾದ ವಿವರವನ್ನು ಸಂಗ್ರಹಿಸಿ ಆಮೇಲೆ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ಸರ್ಕಾರದ ಆಲೋಚನೆಯಲ್ಲಿದೆ.

ಕೆ. ಪ್ರಭಾಕರ್.—ಒಂದು ದೇಶದ ಭಾಗ ಅತಿ ಹಿಂದುಳಿದಿದೆ ಎಂದು ಯಾವ ಯಾವ ಆಧಾರದ ಮೇಲೆ ಸರ್ಕಾರ ತೀರ್ಮಾನ ಮಾಡುತ್ತದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವರೀತಿ ಹಿಂದುಳಿದಿದೆ ಎನ್ನುವುದು ಅವರ ಪ್ರಶ್ನೆಯಾಗಿದೆ. ಸಧ್ಯದ ಮುಂದಿರುವ ಪ್ರಶ್ನೆಗೂ, ಇದಕ್ಕೂ ಸಂಬಂಧವಿಲ್ಲ.

ಶ್ರೀ ಎ. ಜಿ. ಕೊಡಗಿ.—ರಾಜ್ಯದ ಇತರೆ ಕಡೆಗಳಲ್ಲಿ, ತಾಲ್ಲೂಕು ರಚನೆ ವಿಚಾರ ತಮ್ಮ ಮುಂದೆ ಪರಿಶೀಲನೆಯ ಹಂತದಲ್ಲಿದೆ. ಬೈಂದೂರು ಮತದಾರರ ಕ್ಷೇತ್ರ ಹಿಂದುಳಿದಿದೆ ಎಂದು ತಾವು ಒಪ್ಪಿಕೊಂಡಿದ್ದೀರಿ. ಆಡಳಿತದಿಂದ ಹಿತದೃಷ್ಟಿಯಿಂದ ಅಲ್ಲಿ ತೊಂದರೆಯಾಗಿದೆ ಎನ್ನುವ ದೃಷ್ಟಿಕೋನವನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವಾಗ ಪರಿಶೀಲನೆ ಕೊನೆಗೊಳ್ಳಬಹುದು ? ಯಾವಾಗ ಅಂತಿಮ ತೀರ್ಮಾನ ಕೈಗೊಳ್ಳುತ್ತೀರಿ ಎಂದು ಸ್ಪಷ್ಟವಾದ ಉತ್ತರ ಹೇಳುವುದಕ್ಕೆ ಸಾಧ್ಯವೇ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದುಳಿದ ಪ್ರದೇಶ ಎಂದು ನಾನು ಒಪ್ಪಿಕೊಂಡಿಲ್ಲ ತಾಲ್ಲೂಕುಗಳನ್ನು, ಜಿಲ್ಲೆಗಳನ್ನು ಪುನರ್ವಿಂಗಡಣೆ ಮಾಡಬೇಕಾದರೆ ಬೇಕಾದಂಥ ಅಂಕಿ ಅಂಶಗಳನ್ನು, ಜನಸಂಖ್ಯೆಯ, ವಿಸ್ತೀರ್ಣ ಮತ್ತು ಆಡಳಿತದ ಸೌಲಭ್ಯ ಇತ್ಯಾದಿ ಕೆಲವು ಅಂಶಗಳನ್ನು ತೆಗೆದುಕೊಂಡು ತೀರ್ಮಾನ ಮಾಡುತ್ತೇವೆ. ಅಲ್ಲೊಂದು ಇಲ್ಲೊಂದು ಮಾಡುವುದಕ್ಕೆ ಬದಲಾಗಿ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳನ್ನು, ತಾಲ್ಲೂಕುಗಳನ್ನು ಪುನರ್ವ್ಯವಸ್ಥೆ ಮಾಡತಕ್ಕ ಆಯೋಗವನ್ನು ನೇಮಿಸಿ, ತೀರ್ಮಾನ ತೆಗೆದುಕೊಂಡ ಮೇರೆ ಕಾರ್ಯಗತ ಮಾಡುವಾಗ ಯಾವ ಆಧಾರವಾಗಿ ಮಾಡಬೇಕು ಯಾವುದನ್ನು ಎಷ್ಟಾನವಾಗಿ ಮಾಡಬೇಕು, ಎಲ್ಲವನ್ನು ಒಟ್ಟಿಗೆ ಮಾಡುವುದಕ್ಕೆ ಸಾಧ್ಯವೇ ಎಂದು ಆಲೋಚನ ಮಾಡುವುದು ಇದೆ.

Political Pension for Freedom Fighters in Belgaum District

619. Sri J. S. AMMANNAVAR (Sadalga).—

Will the Minister of State for Home be pleased to state :—

(*a*) the number of applications received for the grant of political pension in each Taluk of the Belgaum District from the Freedom Fighters ;

(*b*) the number of applications sanctioned, rejected and pending in each taluk of Belgaum District ;

(*c*) the steps proposed to be taken to reduce the pendency ?

Sri R. D. KITTUR (Minister of State for Home).—

(*a*) and (*b*) *Vide* statement appended.

(*c*) Every effort is being made to dispose of the pending applications as quickly as possible.